ಬಲವಾಗಿದೆ. ನಿಮ್ಮ ಎದೆನೋವು ಬರೀ ಮಸ್ಕ್ಯುಲರ್ ಪೇನ್ ಇರಬೇಕು. ಒಂದು ಇಂಜೆಕ್ಷನ್ ಕೊಡ್ತೀನಿ... ತಗೊಂಡು ಹೋಗಿ ಆರಾಮಾಗಿ ನಿದ್ದೆ ಮಾಡಿ... ನಾಳೆ ಬೆಳಗಾಗೋ ಹೊತ್ತಿಗೆಲ್ಲ ತೀರಾ ಆರಾಮ್ ಆಗ್ತೀರಿ'– ಅಂತ. ಸುಮ್ಮ ಸುಮ್ಮನೆ ಗಾಬರಿಯಾಗಿ ಬಂದ ಹಾಗಾಯ್ತು ನಡೀರಿ ವಾಪಸ್ ಊರಿಗೆ ಹೋಗೋಣಂತೆ'– ಎಂದು ನಾನು ಹೇಳಿದಾಗ, ಗಣೇಶಯ್ಯ ತೃಪ್ತಿಯ ಮುಗುಳ್ನಗೆ ಬೀರಿದ. ಇಬ್ಬರೂ ಬಸ್‌ಸ್ಟ್ಯಾಂಡಿಗೆ ಬಂದು ಸಿದ್ಧರಾಮ ಹತ್ತಿ ಕುಳಿತೆವು. ಬಸ್‌ಸ್ಟಾರ್ಟ್ ಆಗಿ ಹೊರಟ ತಕ್ಷಣ ನನ್ನ ಮನಸ್ಸು ಮತ್ತೆ ಹೊಯ್ದಾಟ ಶುರುಮಾಡಿತು. ರಸ್ತೆ ಅಷ್ಟೇನೂ ಸಮತಟ್ಟಾಗಿರಲಿಲ್ಲವಾದುದರಿಂದ ಬಸ್ ಸಹ ವಿಪರೀತ ಹೊಯ್ದಾಡುತ್ತಿತ್ತು. ಇಷ್ಟರಮೇಲೆ ಆ ಲೈನಿನಲ್ಲಿ ಹೋಗುವ ಬಸ್ಸುಗಳ ಪೈಕಿ ಇದು ಕೊನೆಯಗಾಡಿ– ಬಸ್ಸಿನ ತುಂಬ ನಾನಾ ನಮೂನೆಯ ಜನಗಳು. ನಿಂತು ನೇತಾಡುವ ಜನಗಳು. ಈ ಎಲ್ಲ ಜನಗಳೂ ಒಂದಿಲ್ಲೊಂದು ದಿನ ಸಾಯಲೇಬೇಕು... ಆದರೆ, ಯಾವಾಗ ಈ ಸಾವು ಬಂದೀತೆಂದು ಯಾರಿಗೂ ಗೊತ್ತಿಲ್ಲ– ಆದುದರಿಂದ ಯಾರೊಬ್ಬರೂ ಈ ಬಗ್ಗೆ ಯೋಚಿಸುವುದೇ ಇಲ್ಲ. ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ಯಕ್ಷನು ಧರ್ಮರಾಯನನ್ನು ಒಂದು ಪ್ರಶ್ನೆ ಕೇಳಿದನಂತೆ– 'ಪ್ರಪಂಚದಲ್ಲೆಲ್ಲ ಅತ್ಯಂತ ಆಶ್ಚರ್ಯದ ಸಂಗತಿ ಯಾವುದು?' ಅಂತ ಧರ್ಮರಾಯ ಉತ್ತರಿಸಿದ. 'ಎಲ್ಲರೂ ಒಂದಲ್ಲ ಒಂದು ದಿನ ಸತ್ತೇಸಾಯುವರೆಂಬುದು ಎಲ್ಲರಿಗೂ ಗೊತ್ತಿದ್ದರೂ, ತಾವ್ಯಾರೂ ಸಾಯುವುದೇ ಇಲ್ಲವೇನೋ ಎಂಬಂತೆ ವರ್ತಿಸುತ್ತಾರಲ್ಲ ಅದೇ ಪ್ರಪಂಚದ ಪರಮಾಶ್ಚರ್ಯ' – ನನಗೂ ಇದೀಗ ಆ ಧರ್ಮರಾಯನದೇ ರೀತಿಯ ಆಲೋಚನೆ ಬರುತ್ತಿದ್ದವು. ಅಷ್ಟರಲ್ಲೇ ನಮ್ಮ ಪಕ್ಕದಲ್ಲೇ ಇಬ್ಬರು ಪ್ರಯಾಣಿಕರಲ್ಲಿ ಸೀಟಿಗಾಗಿ ಹೊಡೆದಾಟ. ಒಬ್ಬ ಅಲ್ಲಿ ಚೀಲ ಇಟ್ಟುಹೋಗಿದ್ದ– ಇನ್ನೊಬ್ಬ ಅದನ್ನು ತೆಗೆದೊಗೆದು ಆ ಜಾಗದಲ್ಲಿ ತಾನು ಕೂತಿದ್ದ. ಮೊದಲು ಚೀಲ ಇಟ್ಟು ಹೋದವನು ಹಿಂತಿರುಗಿದಾಗ ಅವನ ಜಾಗದ ದುರಾಕ್ರಮಣದ ಜೊತೆಗೆ ಅವನ ಚೀಲ ಅದೇ ಸೀಟಿನ ಕೆಳಗೆ ಬಿದ್ದು ಹೊರಳಾಡುತ್ತಿತ್ತು. ಈ ಸ್ಥಿತಿಯನ್ನು ಕಂಡು ಕೆರಳಿದ ಅವನು ಜಗಳ ತೆಗೆದಿದ್ದ– ನನಗೆ ತಡೆಯಲಾಗಲಿಲ್ಲ. ಆ ಮನುಷ್ಯನನ್ನು ಕುರಿತು– 'ಅಯ್ಯಾ, ಯಾಕಪ್ಪಾ ಆ ಸೀಟಿಗಾಗಿ ಇಷ್ಟೊಂದು ರಂಪ ಮಾಡ್ತಾ ಇದೀಯ? ಈ ಪ್ರಪಂಚದಲ್ಲಿ ಯಾರೇನು ಶಾಶ್ವತ? ಎಲ್ರೂ ಒಂದುದಿನ ಇಲ್ಲಿಂದ ಹೋಗೋರೇ ಅಲ್ವ'– ಎಂದೆ. ಆದರೆ ಆತ ಸಿಟ್ಟಿನಿಂದ ಹುಚ್ಚಾಗಿದ್ದ– 'ಓಹೋಹೋ ತೆಗಿರೀ ಕಂಡಿದಿನಿ ನಿಮ್ಮ ವೇದಾಂತ! ಆರಾಮಾಗಿ ಸೀಟು ಸಿಕ್ಕಿದೆ... ನಂಗೆ ನೀತಿ ಹೇಳಾಕೆ ಬರ್ತೀರಾ' ಎಂದು ಗಡಬಡಿಸಿದ– ನಾನು ತಟ್ಟನೆ ಆತನ ಕೈಹಿಡಿದು ಎಳೆದು, ನನ್ನ ಜಾಗವನ್ನೇ ಖಾಲಿ ಮಾಡಿ 'ಬಾಪ್ಪಾ... ಕೂತ್ಕೊಬಾ... ನಾನೇ ನಿಂತಿರ್ತೀನಿ'– ಎಂದೆ. ಆ ಮನುಷ್ಯ ಸ್ವಲ್ಪವೂ ತಡಮಾಡದೆ ನನ್ನ ಜಾಗದಲ್ಲಿ ಕೂತು ಕಾಲುಮೇಲೆ ಕಾಲುಹಾಕಿದ. ಅವನ ಈ ಔದ್ಧತ್ಯವನ್ನು ಕಂಡು ಅಲ್ಲಿದ್ದ ಹಲವಾರು ಪ್ರಯಾಣಿಕರೆಲ್ಲ ಬೊಬ್ಬೆಹಾಕಿ – 'ಏಯ್, ಏಳೋ ನನ್ನಮಗನೆ! ಅವರೇನೋ ದೊಡ್ಡ ಮನುಷ್ರು... ಹೋಗ್ಲಿ ಅಂತ ಜಾಗಬಿಟ್ರೆ ನೀನು, ಭೂಪ, ಆರಾಮಾಗಿ ಕೂತೇಬಿಟ್ಟೆ ಅಲ್ವ?' ಎಂದು ಗದರಿಸಿದರು. ನಾನು ಆ ಜನಗಳಿಗೆಲ್ಲ ಸಮಾಧಾನ ಹೇಳಿ, 'ಇರಲಿ ಬಿಡಿ... ಆತ ಕೂತ್ಕೊಳ್ಳಿ' – ಎಂದು ಆ ಪ್ರಸಂಗಕ್ಕೆ ಮುಕ್ತಾಯ ಹಾಕಿದೆ. ಗಣೇಶಯ್ಯನಿಗೆ ಮಾತ್ರ ನಾನು ಅವನ ಪಕ್ಕಬಿಟ್ಟು ಮೇಲಕ್ಕೆ ಎದ್ದುದು ಹಿತವಾಗಲಿಲ್ಲವೆನ್ನಿಸಿತು.

ಜನಜಂಗುಳಿಯಲ್ಲಿ ನಾನೂ ಗಣೇಶಯ್ಯ ಬೇರೆ ಬೇರೆಯಾದಂತಾಯಿತು. ನನ್ನ ಮನಸ್ಸು ಏನೇನೋ ಆಲೋಚನೆಗಳಲ್ಲಿ ಮುಳುಗಿತು. ಕೇವಲ ಅರವತ್ತೇ ದಿನ ನನ್ನ ಇಲ್ಲಿನ ಬಾಳು. ಆಮೇಲೆ ನಾನೀ ಲೋಕದಲ್ಲಿರುವುದಿಲ್ಲ. ಈ ಜಗತ್ತಿನ ಸಕಲ ವ್ಯಾಪಾರಗಳೂ ನನ್ನ ಪಾಲಿಗೆ